(SRI KADIDAL MANJAPPA.)

Repairs	...	Nagasamudra, Bhatrahalli and Hirekerehalli tanks.

(*c*) Soon.

ಶ್ರೀ ಎ. ಭೀಮಪ್ಪನಾಯಕ್.—ಮೊಳಕಾಲ್ಮುರು ತಾಲ್ಲೂಕಿನಲ್ಲಿ ನಾಲ್ಕು ಕೆರೆಗಳು ನಿರ್ಮಾಣವಾಗಿವೆ ಎಂದು ಹೇಳಿದ್ದೀರಿ? ಅವು ಯಾವುವು?

ಶ್ರೀ ಕಡಿದಾಳ್ ಮಂಜಪ್ಪ.—ತುಪ್ಪದಕ್ಯನಹಳ್ಳಿ, ಗುಡ್ಡದಹಳ್ಳಿ, ಹೊನಹಳ್ಳಿ ಮತ್ತು ಮುದಿಗೆರೆಹಳ್ಳಿ ಕೆರೆಗಳು.

ಶ್ರೀ ಎ. ಭೀಮಪ್ಪನಾಯಕ್.—ಮೊದಲು Proposal ಬಂದುದು ತುಪ್ಪದಕ್ಯನಹಳ್ಳಿ ಕೆರೆಗೆ ಸಂಬಂಧವಾಗಿ ಅಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಯಾವ ಸಂದರ್ಭದಲ್ಲಿ ಬಂತು ಎಂದು ಹೇಳುವುದಕ್ಕೆ ನನ್ನ ಹತ್ತಿರ ಅಂಕಿಅಂಶಗಳು ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ತುಪ್ಪದಕ್ಯನಹಳ್ಳಿ, ಗುಡ್ಡದಹಳ್ಳಿ ಕೆರೆಗಳ ಮಂಜೂರು ಯಾವಾಗ ಆಗುತ್ತದೆ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಪರಿಶೀಲನೆಯಲ್ಲಿದೆ. ಅದು ಆಗುತ್ತದೆ ಎಂದು ಕೂಡ ಈಗ ನಿರ್ಧಾರವಾಗಿ ಹೇಳಲಾರೆ.

ಶ್ರೀ ಎ. ಭೀಮಪ್ಪನಾಯಕ್.—ತುಪ್ಪದಕ್ಯನಹಳ್ಳಿ ಕೆರೆಗೆ ಎಷ್ಟಕ್ಕೆ estimate ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—1952ನೇ ಇಸವಿಯಲ್ಲಿ 4,41,000 ಚಿಲ್ಲರೆ estimate ಬಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಈಗ ಪುನಃ revise ಆಗಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಗುಡ್ಡದಹಳ್ಳಿಕೆರೆಗೆ ಎಷ್ಟಕ್ಕೆ estimate ಬಂದಿದೆ?

ಶ್ರೀ ಕಡಿದಾಳ್ ಮಂಜಪ್ಪ.—1·52 ಲಕ್ಷ ರೂಪಾಯಿಗಳು.

ಶ್ರೀ ಎ. ಭೀಮಪ್ಪನಾಯಕ್.—ಇನ್ನೆರಡು ಕೆರೆಗಳಿಗೆ "soon" ಎಂದು ಉತ್ತರದಲ್ಲಿ ಹೇಳಿದ್ದೀರಿ. ಆ 'soon' ಎಂಬ ಶಬ್ದದ ಅರ್ಥವೇನು?

ಅಧ್ಯಕ್ಷರು.—"Soon" ಎಂದರೆ ಜಾಗ್ರತೆ ಎಂದು ಅರ್ಥ.

ಶ್ರೀ ಎ. ಭೀಮಪ್ಪನಾಯಕ್.—"Soon" ಎಂದು ಹೇಳುವುದಕ್ಕೆ ಬದಲಾಗಿ ಇಷ್ಟು ದಿವಸಗಳು ಎಂದು ಹೇಳಿದ್ದರೆ ಜನಗಳಿಗೆ ಸಂತೋಷವಾಗುತ್ತಿತ್ತು. ಆರು ತಿಂಗಳೋ, ಮೂರು ತಿಂಗಳೋ ಅಥವಾ ಹನ್ನೆರಡು ವರ್ಷವೋ, ಈ ರೀತಿ ಒಂದು ಕಾಲ ಪರಿಮಿತಿ ಹೇಳಬೇಕು.

Kadidal MANJAPPA.—Sir, though some of these projects are unremunerative, because of the fact that Molakalmuru is subject to distress conditions frequently, the Government have sanctioned these three schemes and as the sanction has already been accorded, my Hon'ble friend may rest assured that they will be taken up as early as possible.

Mr. SPEAKER.—So, the Public Works Minister is partial (laughter).

ಶ್ರೀ ಎ. ಭೀಮಪ್ಪನಾಯಕ್.—ಪಕ್ಕೂರ್ತಿ ಟ್ಯಾಂಕ್ ಮಳೆ ಬಿದ್ದು ಒಡೆದುಹೋಗಿರುವುದನ್ನು ತಕ್ಷಣ restore ಮಾಡುವುದಕ್ಕೆ ಏನು ಏರ್ಪಾಡು ಮಾಡೋಣವಾಗಿದೆ?

Mr. SPEAKER.—I do not think it arises out of this question.

Sri A. BHEEMAPPA NAIK.—There is a proposal for repair of these channels.

Sri Kadidal MANJAPPA.—It was breached recently.

ಶ್ರೀ ಎ. ಭೀಮಪ್ಪನಾಯಕ್.—ಕೆರೆಯ ಹಿಂದೆ ಯಾವಾಗಲೂ ನೀರು ಹರಿಯುತ್ತಾ ಇರುವುದರಿಂದ, ಅಣೆಕಟ್ಟು, ಚಾನಲ್ ಮಾಡಬೇಕೆಂದು proposal ಇಲ್ಲವೆ?

Sri Kadidai MANJAPPA.—I think there is some other interpellation in connection with that tank.

ಶ್ರೀ ಎ. ಭೀಮಪ್ಪನಾಯಕ್.—ನಾಗನಮುದ್ರ, ಬತ್ತರಹಳ್ಳಿ ಮತ್ತು ಹಿರೇಕೆರೆಹಳ್ಳಿ ಕೆರೆಗಳ ರಿಪೇರಿ ಗೋಸ್ಕರ ಎಷ್ಟು ಅಂದಾಜುಮಾಡಲಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—ನಾಗನಮುದ್ರ ಕೆರೆಗೆ 1,100 ರೂಪಾಯಿಗಳು, ಬತ್ತರಹಳ್ಳಿ ಕೆರೆಗೆ 5,250 ರೂಪಾಯಿಗಳು ಮತ್ತು ಹಿರೇಕೆರೆಹಳ್ಳಿ ಕೆರೆಗೆ 3,840 ರೂಪಾಯಿಗಳು ಅಂದಾಜು ಆಗಿವೆ.

ಶ್ರೀ ಎ. ಭೀಮಪ್ಪನಾಯಕ್.—ಉರಿತಾಳು ಚಾವಲನ್ನು deepenಮಾಡಿ irrigation ಹೆಚ್ಚಿಸುವುದಕ್ಕೆ 40,000 ರೂಪಾಯಿಗಳ ಒಂದು proposal ಬಂದಿದೆಯೇ?

Sri Kadidal MANJAPPA.—The question pertains to construction and repair of tanks.

Harijan applicants for lands in Chickballapur and Sidlaghatta Taluks (Malki amounts due).

Q.—171. Sri A. MUNIYAPPA (Chikballapur—Sidlaghatta—Scheduled Castes).—

Will the Government be pleased to state:—

(*a*) the number of Harijan applicants who have not paid the *malki* amount in respect of lands and have not taken the *saguvali* chits in Chickballapur and Sidlaghatta Taluks;

(*b*) their names and the amount each has to pay (talukwar details to be furnished)?

A.—Sri Kadidal MANJAPPA (Minister for Revenue and Public Works).—

(*a*) Chickballapur ... Nil.
Sidlaghatta ... Nil.

(*b*) Does not arise in view of answer to (*a*).

ಶ್ರೀ ಎ. ಮುನಿಯಪ್ಪ.—ಮೊನ್ನೆತಾನೆ ಸರ್ಕಾರದವರು ಹರಿಜನರಿಂದ ಮಾಲಕಿ ಪೊಬಲಗು ವಸೂಲು ಮಾಡದೆ ಅವರಿಗೆ ಸಾಗುವಳಿ ಚೀಟಿ ಕೊಡಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಅದಕ್ಕಾಗಿ ಅವರನ್ನು ವಂದಿಸುತ್ತೇನೆ.

ನಾನು ಉಪ ಪ್ರಶ್ನೆಗಳನ್ನು ಕೇಳುವುದಿಲ್ಲ.

Mr. SPEKER.—Question No. 59.

Sri Kadidal MANJAPPA.—This question may be kindly taken after some time when the concerned Minister comes.

Sri R. K. PRASAD.—Question No. 514 may be taken later on since the concerned Minister is absent.

Grant of site to Dalita Vidyarthi Nilaya, Mysore.

Q.—134. Sri B. T. KEMPARAJ (Bangalore South--Scheduled Castes).—Will the Government be pleased to state :—

(*a*) whether there was a recommendation sent by the City Improvement Trust Board, Mysore, to the effect that a site may be granted to Dalita Vidyarthi Nilaya, Mysore ;

(*b*) whether they granted the site to Dalita Vidyarthi Nilaya ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) No.

ಶ್ರೀ ಬಿ. ಟಿ. ಕೆಂಪರಾಜ್.—ಟ್ರಸ್ಟ್ ಬೋರ್ಡಿನವರು ನಿವೇಶನವನ್ನು ಕೊಡಬಹುದೆಂದು ಹೇಳಿದರೂ ಅದನ್ನು ಸರ್ಕಾರದವರೇಕೆ ಅಂಗೀಕರಿಸಲಿಲ್ಲ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯಿಲ್ಲವೆಂದು ಈಗಾಗಲೇ ಸರ್ಕಾರದವರು ನಿಮ್ಮ ವರ್ಗದವರ ಹಾಸ್ಟೆಲು ಕಟ್ಟುವುದಕ್ಕೆ ಸೈಟು ಮತ್ತು ಹಣವನ್ನು ಕೊಟ್ಟಿದ್ದಾರೆ. ಆದಕಾರಣ ಪುನಃ ಇದಕ್ಕೆ ಅವಶ್ಯಕತೆಯಿಲ್ಲವೆಂದು ಕೊಡಲಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಈ ಹಾಸ್ಟೆಲನ್ನು ಕಟ್ಟುವುದಕ್ಕೆ ಹಣವನ್ನು ಸರ್ಕಾರ ಕೊಡಬೇಕೆಂದು ಕೇಳಿದರೆ ?

ಶ್ರೀ ಟಿ. ಚೆನ್ನಯ್ಯ.—ಇಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹೀಗಿರುವಾಗ ಟ್ರಸ್ಟ್ ಬೋರ್ಡಿನವರು ಸೈಟನ್ನು ಕೊಡಬಹುದೆಂದು ಹೇಳಿದರೂ ಸರ್ಕಾರ ಕೊಡಲು ತೊಂದರೆಯೇನು ?

ಶ್ರೀ ಟಿ. ಚನ್ನಯ್ಯ.—ಹಾಸ್ಟಲ್ ಕಟ್ಟಡಕ್ಕೆ ಬೇಕಾದ ಹಣವನ್ನು ಒದಗಿಸಿಕೊಂಡಿಲ್ಲವಾದುದರಿಂದ ಕೊಡಲಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಸೈಟು ಕೊಡುವುದಕ್ಕಿಂತ ಮುಂಚೆ ಹಣವನ್ನೊದಗಿಸಿಕೊಂಡಿರಬೇಕೋ ಅಥವಾ ಕೊಟ್ಟಮೇಲೆ ಒದಗಿಸುವುದಕ್ಕೆ ಪ್ರಯತ್ನ ಮಾಡಬೇಕೋ ?

ಶ್ರೀ ಟಿ. ಚನ್ನಯ್ಯ.—ಕಟ್ಟಡ ಕಟ್ಟುವುದಕ್ಕಿಂತ ಮುಂಚೆ ಹಣವನ್ನೊದಗಿಸಿಕೊಂಡಿರಬೇಕು.

ಶ್ರೀ ಬಿ. ಟಿ. ಕೆಂಪರಾಜ್.—ಆ ರೀತಿ ಸರ್ಕಾರಿ ಆಜ್ಞೆ ಇದೆಯೇ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಕಟ್ಟಡ ಕಟ್ಟಲು ಹಣವಿದ್ದರೆ ಸೈಟುಗಳನ್ನು ಮಂಜೂರು ಮಾಡುತ್ತಾರೆ. ಸೈಟುಗಳನ್ನು ಕೊಟ್ಟು ಅನೇಕರು ಕಟ್ಟಡ ಕಟ್ಟಲು ಹಣವಿಲ್ಲದೆ ಹಾಗೆಯೇ ಬಿಟ್ಟಿದ್ದಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಿದ್ದರೆ, ಅಂಥ ನಿದರ್ಶನಗಳನ್ನು ಕೊಡುವುದಕ್ಕೆ ಸಾಧ್ಯವೆ ?

ಶ್ರೀ ಟಿ. ಚನ್ನಯ್ಯ.—ಕೊಡುತ್ತೇನೆ. ಈಗ ಮೈಸೂರಿನಲ್ಲಿ ಸುಮಾರು 22 ಹಾಸ್ಟೆಲುಗಳಿಗೆ ಸೈಟುಗಳನ್ನು ಮಂಜೂರು ಮಾಡಿದ್ದಾರೆ. ಅದರಲ್ಲಿ 12 ಹಾಸ್ಟೆಲುಗಳಿಗೆ ಸುಮಾರು ಸೈಟು ಕೊಟ್ಟು ಹತ್ತು ವರ್ಷಗಳಾಗಿದ್ದರೂ ಇನ್ನೂ ಕಟ್ಟಡಗಳನ್ನು ಕಟ್ಟಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಆ ಹನ್ನೆರಡನ್ನು ಕಟ್ಟಿಲ್ಲವಾದುದರಿಂದ ಈ ಸೈಟನ್ನು ಕೊಟ್ಟರೆ ಕಟ್ಟಡ ಕಟ್ಟುವುದಿಲ್ಲವೆಂದು ಹೇಗೆ ತೀರ್ಮಾನ ತೆಗೆದುಕೊಳ್ಳಲಾಯಿತು ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಟ್ರಸ್ಟ್ ಬೋರ್ಡನ್ನು ಸೈಟು ಬೇಕೆಂದು ಯಾರಾದರೂ ಕೇಳಿದಾಗ, ಕಟ್ಟಡಕ್ಕೆ ಎಷ್ಟು ಅಂದಾಜಾಗುತ್ತದೆಯೋ ಅದರಲ್ಲಿ ಅರ್ಧ ಭಾಗವನ್ನಾದರೂ ಅವರು ಒದಗಿಸಿಕೊಂಡಿರಬೇಕು. ಈ ಸಂದರ್ಭದಲ್ಲಿ ಇವರು ಹಾಗೆ ಮಾಡಿರಲಿಲ್ಲವಾದುದರಿಂದ ಕೊಡಲಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಆ ರೀತಿ ಒದಗಿಸಿಕೊಂಡಿಲ್ಲವೆಂದು ಅವರು ಹೇಳಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಸಾಧಾರಣವಾಗಿ 50 ಸಾವಿರ ಅಂದಾಜೆಂದು ಹೇಳುತ್ತಾರೆ, ಅದರಲ್ಲಿ 25 ಸಾವಿರವನ್ನಾದರೂ ಅವರು ಇಟ್ಟುಕೊಂಡಿರಬೇಕು. ಆದರೆ ಅವರು ಹಾಗೆ ಮಾಡಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹಾಗಾದರೆ ಅವರು ಹಣವನ್ನೊದಗಿಸಿಕೊಳ್ಳುತ್ತೇವೆಂದು ಬಂದರೆ ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬಂದರೆ ಮಾಡುತ್ತೇವೆ.

ಶ್ರೀ ಬಿ. ರಾಚಯ್ಯ.—ಮೈಸೂರು ನಗರದಲ್ಲಿ ಎಷ್ಟು ನಿಮ್ಮ ವರ್ಗದವರ ಹಾಸ್ಟೆಲುಗಳಿವೆ ?

ಶ್ರೀ ಟಿ. ಚನ್ನಯ್ಯ.—ಈಗ ನಿಮ್ಮ ಪಂಗಡದವರ ಸರ್ಕಾರಿ ಹಾಸ್ಟಲು 100 ಹುಡುಗರಿಗಿದೆ; 65 ಹುಡುಗಿಯರಿಗೆ ಒಂದು ಬೋರ್ಡಿಂಗ್ ಹೋಂ ಇದೆ; ಇವಲ್ಲದೆ ಏಡೆಡ್ ಹಾಸ್ಟಲುಗಳಿವೆ ; 52ಹುಡುಗರಿಗೆ ಚಾಮುಂಡೇಶ್ವರಿ ಏಡೆಡ್ ಹಾಸ್ಟಲಿದೆ ; ಇನ್ನೊಂದು ಏಡೆಡ್ ಹಾಸ್ಟಲಿನಲ್ಲಿ 39 ಹುಡುಗರಿದ್ದಾರೆ, ಏಡೆಡ್ ಅದಿಕರ್ಣಾಟಕ ಹಾಸ್ಟೆಲ್‌ನಲ್ಲಿ 36 ಹುಡುಗರಿಗವಕಾಶವಿದೆ; ದಲಿತ ವಿದ್ಯಾರ್ಥಿನಿಲಯದಲ್ಲಿ 26 ಹುಡುಗರಿರಲು ಅವಕಾಶವಿದೆ. ಒಟ್ಟು ಏಡೆಡ್ ಹಾಸ್ಟಲುಗಳಲ್ಲಿ 133 ಮಂದಿ ಇದ್ದಾರೆ. ಸರ್ಕಾರಿ ಹಾಸ್ಟಲಿನಲ್ಲಿ 165ಹುಡುಗರಿದ್ದಾರೆ. ಇವಲ್ಲದೆ ಒಡ್ಡರ ಹಾಸ್ಟಲು, ಜಯಚಾಮರಾಜೇಂದ್ರ ಅದಿಕರ್ಣಾಟಕ ಹಾಸ್ಟಲಿವೆ.